ಓಎಸ್. 100/2016 ಪಿಡಬ್ಲ್ಯೂ1

ದಿನಾಂಕಃ 20.09.2024ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎ ಎಸ್ ಎಸ್ ಆರ್ ವಕೀಲರಿಂದಃ

ನಿಪಿ 28 ಮತ್ತು 29 ನ್ನು ಸಂಬಧಿಸಿದ ಅಧಿಕಾರಿಗಳ ಜೊತೆ ಶಾಮಿಲಾಗಿ ಇತ್ತೀಚೆಗೆ ನಾನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ 30 ರಲ್ಲಿ ಪ್ರತಿವಾದಿಗಳಿಗೆ ಸೇರಿದ ಸ್ವತ್ತಿನ ಬಗ್ಗೆ ಅಳತೆ ನಮೂದಾಗಿಲ್ಲ ಎಂದರೆ ಸರಿಯಲ್ಲ. ನಗರ ಸಭೆ ಅಧಿಕಾರಿಗಳು ಯಾವುದೇ ಜಾಗವನ್ನು ಅಸೆಸ್ಮೆಂಟ್ ನೀಡುವಾಗ ಅಳತೆ ಮಾಡಿ ನೀಡುತ್ತಾರೆ ಎಂದರೆ ಸರಿ . ನಾನು ನನ್ನ ಸ್ವತ್ತನ್ನು 2013 ರಲ್ಲಿ ತೆಗೆದುಕೊಂಡಿರುತ್ತೇನೆ ಎಂದರೆ ಸರಿ . ನಾನು ಸದರಿ ಸ್ವತ್ತನ್ನು ತೆಗೆದುಕೊಳ್ಳುವ ಮೊದಲೇ ಪ್ರತಿವಾದಿಗಳ ಹೆಸರಿನಲ್ಲಿ ಅಸೆಸ್ಮೆಂಟ್ ಇತ್ತು ಎಂದರೆ ಸರಿ . ಪ್ರತಿವಾದಿಗಳುತಮ್ಮ ಅಸೆಸ್ಮೆಂಟ್ ನಲ್ಲಿ ನಮೂದಿಸಿರುವ ವಿಸ್ತೀರ್ಣದಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳುತಮಗೆ ಸೇರಿದ ವಿಸ್ತೀರ್ಣದಲ್ಲಿ ಮಾತ್ರ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿಯಲ್ಲ . ಪ್ರತಿವಾದಿಗಳಿಗೆ ಸೇರಿದ ಜಾಗವನ್ನು ಅಕ್ರಮವಾಗಿ ಕಬಳಿಸಿಕೊಳ್ಳಲು ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸುಳ್ಳು. ನಾನು ಕ್ರಯಕ್ಕೆ ತೆಗೆದುಕೊಳ್ಳುವ 15-20 ವರ್ಷಗಳ ಹಿಂದೆಯೆ ಪ್ರತಿವಾದಿಗಳಿಗೆ ಅಸೆಸ್ಮೆಂಟ್ ಆಗಿತ್ತು ಎಂದರೆ ಸುಳ್ಳು. ಪ್ರತಿವಾದಿಗಳು ನನ್ನ ಯಾವುದೇ ಜಾಗವನ್ನು ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.